ಶೆಡ್ಡಿಂಗ್ ನಿರ್ವಹಿಸಲಾಗಿತ್ತು. ಈ ವರ್ಷವೂ ಸಹ ಗುಲ್ಬರ್ಗಾ ವಿಭಾಗದ ನಗರ ಪ್ರದೇಶಗಳಲ್ಲಿ ನಿಯಮಿತ ಲೋಡ್ ಶೆಡ್ಡಿಂಗ್ ನಿರ್ವಹಿಸುತ್ತಿಲ್ಲ.ಆದರೆ ಕಳೆದ ವರ್ಷದಂತೆ ಈ ವರ್ಷವೂ ಗ್ರಾಮಾಂತರ ಪ್ರದೇಶಗಳಲ್ಲಿ ನಿಯಮಿತ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸಲಾಗುತ್ತಿದೆ.

ಆ) ಸಿಂಧನೂರು ಕ್ಷೇತ್ರದ ಮುಕ್ಕುಂದ ಮತ್ತು ಮುದ್ದಾಪುರ ಕ್ರಾಸ್ ಗ್ರಾಮಗಳಲ್ಲಿ 110 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ಗಳನ್ನು ಸ್ಥಾಪಿಸುವ ಪ್ರಸ್ತಾವನೆಗಳು ಸದ್ಯಕ್ಕೆ ಇರುವುದಿಲ್ಲ.

ಸಿಂಧನೂರು ತಾಲ್ಲೂಕಿನ ಸಾಲಗುಂದಾ ಏತ ನೀರಾವರಿ ಯೋಜನೆ

799(1109) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಿಂಧನೂರು ಕ್ಷೇತ್ರದ ಸಾಲಗುಂದಾ ಗ್ರಾಮದ ಏತ ನೀರಾವರಿ ಯೋಜನೆ ಯಾವ ಹಂತದಲ್ಲಿದೆ;

ಆ) ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ನಿಗದಿ ಪಡಿಸಿದ ಹಣವೆಷ್ಟು;

ಇ) ಈ ಯೋಜನೆ ಯಾವಾಗ ಪೂರ್ಣಗೊಳ್ಳಲಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಈ ಯೋಜನೆಗೆ 230.00 ಲಕ್ಷ ರೂ.ಗಳ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ಆ) 0.10 ಲಕ್ಷ ರೂ.ಗಳು

ಇ) ಯೋಜನೆಗೆ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಅನುಮೋದನೆ ದೊರೆತ ನಂತರ ಅನುದಾನದ ಲಭ್ಯತೆಯ ಮೇಲೆ ಅಂದಾಜಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಹಾಸನ ನಗರದಲ್ಲಿ ಒಂಟಿ ಅಂಕಿ ಲಾಟರಿ ತಡೆಗಟ್ಟಲು ಕ್ರಮ

800(779) ಶ್ರೀ ಹನುಮೇಗೌಡ, ಕೆ.ಹೆಚ್. (ಹಾಸನ) ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ ನಗರದಲ್ಲಿ ಕೆಳದ ಒಂದು ತಿಂಗಳಿಂದ ಒಂಟಿ ಅಂಕಿ ಲಾಟರಿ, ಮಟಕಾ ನಿರ್ಬೀತವಾಗಿ, ಯಥೇಚ್ಚವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಆ) ಇದರಿಂದಾಗಿ ಹಾಸನ ನಗರ ಮತ್ತು ಸುತ್ತಮುತ್ತ ಬಡಜನರು ಏಕಾಏಕಿ ಲಕ್ಷಾಧಿಪತಿಗಳಾಗಬೇಕೆಂಬ ಹಂಬಲದಿಂದ ಸಾವಿರಾರು ಜನರು ಹಣವನ್ನು ಕಟ್ಟಿ ನಿರ್ಗತಿಕರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಾಬುರಾವ್ ಚಿಂಚನಸೂರ್ (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು)

ಅ) ಬಂದಿಲ್ಲ

ಆ) ಬಂದಿಲ್ಲ

ಇ) ಉದ್ಭವಿಸುವುದಿಲ್ಲ.